# ಓಪನ್ ಸೂಪರ್‌ಸ್ಟಾರ್

ಆಮೀರ್ ಖಾನ್ ನಿರ್ಮಿಸಿ, ನಟಿಸಿರುವ 'ಸೀಕ್ರೆಟ್ ಸೂಪರ್‌ಸ್ಟಾರ್' ಸಿನಿಮಾ ನೋಡಿಬಂದ ಬಾಲಿವುಡ್‌ನ ಅತಿರಥರೆಲ್ಲ ಏಕಕಂಠದಿಂದ 'ಇದು ಈ ವರ್ಷದ ಅತ್ಯುತ್ತಮ ಸಿನಿಮಾ' ಎಂದು ಶಿಫಾರಸು ಮಾಡುತ್ತಿದ್ದಾರೆ. ಇನ್ನೊಂದೆಡೆ ಥಿಯೇಟರ್‌ನಲ್ಲೂ ಕುಟುಂಬ ಸಮೇತ ಪ್ರೇಕ್ಷಕರು ಮುಗಿಬೀಳುತ್ತಿದ್ದಾರೆ. 'ದಂಗಲ್'ನಲ್ಲಿ ಅಮೀರ್ ಖಾನ್‌ನ ಮಗಳ ಪಾತ್ರ ನಿರ್ವಹಿಸಿದ್ದ ಕಾಶ್ಮೀರಿ ಹುಡುಗಿ ಝೈರಾ ವಾಸಿಂ ತನ್ನ ಅತ್ಯುತ್ತಮ ನಟನೆಯಿಂದ ಪ್ರೇಕ್ಷಕರ ಕಣ್ಣು ಹನಿಗೂಡಿಸಿದ್ದಾಳೆ. ಸ್ಪೆಶಲ್ ಪ್ರೀಮಿಯರ್ ಷೋ ನೋಡಿದ ಸಚಿನ್ ತೆಂಡೂಲ್ಕರ್, 'ನಿಜಕ್ಕೂ ಇದೊಂದು ಹೃದಯಸ್ಪರ್ಶಿ ಸಿನಿಮಾ' ಎಂದಿದ್ದರೆ, ರೇಖಾ, 'ಈ ಅಮೀರ್ ಖಾನ್‌ನನ್ನು ಹೊಗಳುವುದನ್ನು ನಿಲ್ಲಿಸಲು ಸಾಧ್ಯವೇ ಇಲ್ಲ' ಎಂದಿದ್ದಾರೆ. ಚಿತ್ರಸಾಹಿತಿ ಜಾವೇದ್ ಅಖ್ತರ್, 'ಅಮೀರ್ ಒಳ್ಳೆಯ ಸಿನಿಮಾಗಳನ್ನು ಮಾತ್ರ ಮಾಡುತ್ತಾನೆ. ಇದೊಂದು ಕಲ್ಟ್ ಸಿನಿಮಾ' ಎಂದು ಹೊಗಳಿದ್ದಾರೆ. ಸಿನಿಮಾ ನೋಡಿದವರ ಪಟ್ಟಿಯಲ್ಲಿ ಹಿರಿಯ ರಾಜಕಾರಣಿ ಎಲ್.ಕೆ.ಆಡ್ವಾಣಿ ಕೂಡಾ ಸೇರಿದ್ದಾರೆ.

'ಸೀಕ್ರೆಟ್ ಸೂಪರ್‌ಸ್ಟಾರ್'ನ ನಿರ್ದೇಶಕ ಅದ್ವೈತ್ ಚಂದನ್. ಈತ ಕಳೆದ ಏಳು ವರ್ಷಗಳಿಂದ ಅಮೀರ್ ಖಾನ್ ಪ್ರೊಡಕ್ಷನ್‌ನಲ್ಲಿ ಅಮೀರ್‌ನ ಬಲಗೈ ಬಂಟನಾಗಿ ಕೆಲಸ ಮಾಡುತ್ತಿರುವಾತ. ಮಿಸ್ಟರ್ ಇಂಡಿಯಾ, ಜೋ ಜೀತಾ ವೊಹಿ ಸಿಕಂದರ್, ಮೈನೆ ಪ್ಯಾರ್ ಕಿಯಾ ಮುಂತಾದ ಸಿನಿಮಾಗಳನ್ನು ನೋಡುತ್ತಾ ಬೆಳೆದ ಅದ್ವೈತ್, ಪ್ರಹ್ಲಾದ್ ಕಕ್ಕರ್ ಮತ್ತು ರೀಮಾ ಕಾಗ್ಟಿ ಅವರ ಕೈಕೆಳಗೆ ಸಹಾಯಕನಾಗಿ ಕೆಲಸ ಕಲಿತವನು. ಪ್ರಥ್ವಿ ಥಿಯೇಟರ್‌ನಲ್ಲಿ ಸ್ವಯಂಸೇವಕನಾಗಿ ಪುಕ್ಕಟೆ ನಾಟಕ ನೋಡುತ್ತಿದ್ದವನು. 12ನೇ ತರಗತಿಯಲ್ಲಿ ಕಲಿಕೆ ಬೇಸರವಾಗಿ ಶಾಲೆಗೆ ಗುಡ್‌ಬೈ ಹೇಳಿದವನು.

ತನ್ನ ಚಿತ್ರದ ಕಥೆಯನ್ನು ಈತ ಮೊದಲು ಹೇಳಿದ್ದು ಅಮೀರ್ ಪತ್ನಿ ಕಿರಣ್‌ಗೆ. ಆಕೆಯಿಂದ ಗ್ರೀನ್ ಸಿಗ್ನಲ್ ಸಿಕ್ಕಿದ ಬಳಿಕ ಅಮೀರ್ ಮುಂದೆ ಚಿತ್ರಕಥೆ ಹೇಳಲು ಕುಳಿತ. ಅದಾಗಲೆ 40–50 ಚಿತ್ರಕಥೆಗಳನ್ನು ಅಮೀರ್ ತಿರಸ್ಕರಿಸಿದ್ದು ಅದ್ವೈತ್‌ಗೆ ಗೊತ್ತಿತ್ತು. ಆದರೆ ಅದ್ವೈತ್‌ನ ಚಿತ್ರಕಥೆಯನ್ನು ಕೇಳಿದ ಅಮೀರ್, ಮರುಮಾತಾಡದೆ 'ಯಾವಾಗ ಶುರು ಮಾಡ್ತೀಯ?' ಎಂದು ಕೇಳಿದನಂತೆ!

ಅಮೀರ್‌ಖಾನ್ ನಿಜಕ್ಕೂ ಬಾಲಿವುಡ್‌ಗೆ ಬಹುದೊಡ್ಡ ಆಸ್ತಿ. ವರ್ಷಕ್ಕೆ ಒಂದೋ ಎರಡೋ ಒಳ್ಳೆಯ ಚಿತ್ರಗಳನ್ನು ಖಚಿತವಾಗಿ ಕೊಡುತ್ತಿರುವ ಅಮೀರ್, ಹೊಸ ಪ್ರತಿಭೆಗಳಿಗೆ ವೇದಿಕೆ ಕಲ್ಪಿಸುವುದರಲ್ಲೂ ಎತ್ತಿದ ಕೈ. 'ಸೂಪರ್‌ಸ್ಟಾರ್' ಸಿನಿಮಾದಿಂದ ಅದ್ವೈತ್ ಮತ್ತು ಝೈರಾ ಇಬ್ಬರೂ ಓಪನ್ ಸೂಪರ್ ಸ್ಟಾರ್‌ಗಳಾಗುವುದರಲ್ಲಿ ಸಂಶಯವಿಲ್ಲ.



ನಿರ್ದೇಶಕ ಅದ್ವೈತ್ ಚಂದನ್ ಮತ್ತು ಅಮೀರ್ ಖಾನ್

# ವಿಜಯ್ ರಾಜಕೀಯಕ್ಕೆ?

ತಮಿಳು ನಟ ವಿಜಯ್‌ಗೆ ರಾಜಕೀಯ ಪ್ರವೇಶಿಸುವ ಆಕಾಂಕ್ಷೆ ಇದೆಯೆ? ಆತನ ಹೊಸ ಸಿನಿಮಾ 'ಮರ್ಸೆಲ್' ನೋಡಿದವರು ಹಾಗೆಂದು ಅನುಮಾನ ಪಡುತ್ತಿರುವುದು ಸುಳ್ಳಲ್ಲ. ಮೊದಲ ದಿನವೇ ವಿಶ್ವದಾದ್ಯಂತ 43 ಕೋಟಿ ರೂಪಾಯಿ ಕಲೆಕ್ಷನ್ ಮಾಡಿ ಬಾಕ್ಸಾಫೀಸನ್ನು ಚಿಂದಿ ಉಡಾಯಿಸಿರುವ 'ಮರ್ಸೆಲ್'ನಲ್ಲಿ ಕೇಂದ್ರ ಸರ್ಕಾರದ ನೋಟು ನಿಷೇಧ ಸಹಿತ ಹಲವು ನಿರ್ಧಾರಗಳನ್ನು ಕಟುವಾಗಿ ಟೀಕಿಸಿರುವುದು ಈಗ ವಿವಾದದ ಹೊಗೆ ಎಬ್ಬಿಸಿದೆ. ರಾಜಕೀಯಕ್ಕೆ ಸೇರುವ ಉದ್ದೇಶದಿಂದಲೇ ವಿಜಯ್ ಚಿತ್ರದಲ್ಲಿ ರಾಜಕೀಯ ಡೈಲಾಗ್‌ಗಳನ್ನು ಹೊಡೆದಿದ್ದಾನೆ ಎನ್ನುವುದು ಅಭಿಮಾನಿಗಳ ಊಹೆ. ಈಗಾಗಲೆ ಬಿಜೆಪಿ ಕಾರ್ಯಕರ್ತರು ಈ ಡೈಲಾಗ್‌ಗಳನ್ನು ಪ್ರತಿಭಟಿಸಿ ಬೀದಿಗಿಳಿದು, ಚಿತ್ರಕ್ಕೆ ಇನ್ನಷ್ಟು ಪ್ರಚಾರ ಒದಗಿಸಿದ್ದಾರೆ.

ಸಮಂತಾ, ಕಾಜಲ್ ಅಗರವಾಲ್, ನಿತ್ಯಾ ಮೆನನ್ ಮುಂತಾಗಿ ಸೂಪರ್‌ಸ್ಟಾರ್‌ಗಳನ್ನು ಹೊಂದಿರುವ ಈ ಸಿನಿಮಾದ ನಿರ್ದೇಶಕ ಅಟ್ಲೀ, ಈಗ ತಮಿಳುನಾಡಿನಲ್ಲಿ ಮನೆಮಾತಾಗಿದ್ದಾರೆ. ಅದಕ್ಕೆ

